# *Form No.4.*

# *Deposition Sheet( R.P.52)*

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC :11/2024**

**CW12**

**PW11**

| | | |
|---|---|---|
| ಸಾಕ್ಷಿಯ ಹೆಸರು | ಃ | ಅಭಯ್ ಶೆಣೈ |
| ತಂದೆ ಹೆಸರು | ಃ | ಶಂಕರ್ ಶೆಣೈ |
| ಪ್ರಾಯ | ಃ | 34 ವರ್ಷ |
| ಉದ್ಯೋಗ | ಃ | ವ್ಯಾಪಾರ |
| ವಾಸ | ಃ | ಅಜೆಕಾರು |

ದಿನಾಂಕ : **28.03.2025** ರಂದು ಪಿಡಬ್ಲ್ಯೂ - 11/ಸಿಡಬ್ಲ್ಯೂ - 12 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ನಿಪಿ -11 ರಲ್ಲಿ ನನ್ನ ಸಹಿ ಇದ್ದು, ನನ್ನ ಸಹಿಯನ್ನು ನಿಪಿ - 11(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 3 – 4 ವರ್ಷದ ಹಿಂದೆ ಅಜೆಕಾರಿನ ಪೋಲೀಸ್ ಠಾಣೆಯಲ್ಲಿ ಮಾಡಿದ್ದೇನೆ. ಯಾವ ಕಾರಣಕ್ಕಾಗಿ ಸದರಿ ಸಹಿ

ಮಾಡಿದ್ದೇನೆ ಎಂದು ನೆನಪಿಲ್ಲ. ಈಗ ನನಗೆ ನಿಪಿ - 12 ತೋರಿಸಿದ್ದು, ಅದರಲ್ಲಿ ನಾನು ಇದ್ದೇನೆ. ಸದರಿ ಫೋಟೋವನ್ನು ಯಾಕೆ ತೆಗೆದಿದ್ದಾರೆ ಎಂದು ನನಗೆ ತಿಳಿದಿಲ್ಲ. ನಿಪಿ -11 ಮತ್ತು ನಿಪಿ -12 ನ್ನು ಮಾಡುವ ಸಮಯದಲ್ಲಿ ಪೋಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ತೂಕ ಮಾಡಿರುವುದಿಲ್ಲ. ನಾನು ಅದರ ಬಗ್ಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಹಿರಿಯ ಸ.ಸ.ಅ. ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ</u> ಹಿರಿಯ ಸ.ಸ.ಅ. ರವರಿಂದಃ

ದಿಃ 06.11.2020 ರಂದು ಪೋಲೀಸರು ನನಗೆ ತೂಕದ ಯಂತ್ರ ತರಲು ಹೇಳಿದ್ದರು ಎಂದರೆ ಸರಿ. ಅಲ್ಲಿ ಬ್ರಹ್ಮಾವರ ಪೋಲೀಸ್ ಠಾಣೆಯ ಹೆಚ್.ಸಿ ಅಶೋಕ್ ರವರು ಅಂದರೆ ಚಾಸಾ 14 ರವರು ಬ್ರಹ್ಮಾವರ ಪೋಲೀಸ್ ಠಾಣೆಯವರು ವಶಪಡಿಸಿಕೊಂಡಂತಹ ಈ ಪ್ರಕರಣಕ್ಕೆ ಸಂಬಂಧಿಸಿದಂತಹ 125 ಕೆಜಿ ಗೇರುಬೀಜಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿ. ಸದರಿ ಗೇರುಬೀಜಗಳನ್ನು ಚಾಸಾ 10 ರವರ ಸಮಕ್ಷಮ ಚಾಸಾ 16 ರವರು

**CC 11/2024**
**CW12**
**PW11**

ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ನಾನು ಸದರಿ ಗೇರುಬೀಜಗಳನ್ನು ತೂಕ ಮಾಡಿ, ಆ ಸಮಯದಲ್ಲಿ ತಯಾರಿಸಿದಂತಹ ಮಹಜರಿಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಅದೇ ಸಮಯದಲ್ಲಿ ನಿಪಿ -12 ರಂತೆ ಫೋಟೋ ತೆಗೆದಿದ್ದಾರೆ ಎಂದರೆ ಸರಿ. ಅದಕ್ಕೆ ಸಂಬಂಧಿಸಿದಂತೆ ದಿಃ 17.11.2020 ರಂದು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

<u>ಪಾಟೀ ಸವಾಲುಃ ಶ್ರೀ ಪಿ.ಎ.ಎಸ್. 1 ನೇ</u> ಆರೋಪಿತರ ಪರ ವಕೀಲರಿಂದಃ

ಪೋಲೀಸರು ನನ್ನನ್ನು ಠಾಣೆಗೆ ಕರೆಸಿದಾಗ, ಠಾಣೆಯಲ್ಲಿ ಗೇರುಬೀಜಗನಳ್ಳು ತಂದಿಟ್ಟಿದ್ದು, ಅವುಗಳನ್ನು ಯಾರು, ಎಲ್ಲಿಂದ ತಂದಿದ್ದರು ಎಂದು ನನಗೆ ತಿಳಿದಿಲ್ಲ. ಪೋಲೀಸರೆ ತೂಕ ಮಾಡಿ, ಮಹಜರನ್ನು ತಯಾರಿಸಿ, ಸಹಿ ಹಾಕಲು ಹೇಳಿದ ಕಾರಣ ಸಹಿ ಹಾಕಿದ್ದೇನೆ ಎಂದರೆ ಸರಿ. ಸದರಿ ಗೇರುಬೀಜಗಳು ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ತಿಳಿದಿಲ್ಲ. ಅದನ್ನು ಠಾಣೆಗೆ ಯಾಕೆ ತಂದಿದ್ದಾರೆ ಎಂದು ನನಗೆ ತಿಳಿದಿಲ್ಲ. ಚಾಸಾ 1 ರವರು ನನಗೆ ಚಿಕ್ಕವರಿದ್ದಾಗಿನಿಂದಲೂ ಪರಿಚಯವಿದ್ದಾರೆ. ಎಷ್ಟು ಗೇರುಬೀಜ ಇತ್ತು ಎಂದು ನನಗೆ ತಿಳಿದಿಲ್ಲ.

<u>ಪಾಟೀ ಸವಾಲುಃ</u> 2 ಮತ್ತು 3 ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಮೋದಿಸುತ್ತಾರೆ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.